**ಸಾಕ್ಷಿಯನ್ನು ದಿನಾಂಕ: 17.02.2026 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ BBH ವಕೀಲರಿಂದಃ**

ಈ ದಾವೆಯನ್ನು ನಾನೇ ಹೂಡಿರುತ್ತೇನೆ. ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ಹೂಡಿರುತ್ತೇನೆ. ನನ್ನ ಮತ್ತು 1ನೇ ಪ್ರತಿವಾದಿಯ ನಡುವೆ ಏನು ವ್ಯವಹಾರ ಇತ್ತು ಎಂದರೆ ಸಾಕ್ಷಿಯು ಜಮೀನು ಖರೀದಿ ವ್ಯವಹಾರ ಆಗಿತ್ತು ಎಂದು ಹೇಳುತ್ತಾರೆ. ಸದರಿ ಜಮೀನನ್ನು ಪ್ರತಿವಾದಿಯ ತಂದೆ ಅಂದರೆ ನಮ್ಮ ಚಿಕ್ಕಪ್ಪನಿಂದ ಖರೀದಿ ಮಾಡಿಕೊಂಡಿರುತ್ತೇನೆ. ಪ್ರತಿವಾದಿಯ ತಂದೆಯು ಧಾರವಾಡದಲ್ಲಿ ವಾಸ ಮಾಡುತ್ತಿದ್ದರು. ಸದರಿಯವರು ಧಾರವಾಡದಲ್ಲಿ ನೌಕರಿ ಮಾಡುತ್ತಿದ್ದರು. ಸದರಿಯವರು ಧಾರವಾಡದಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೆ ನೌಕರಿ ಮಾಡಿದ್ದರು ಹಾಗೂ ಯಾವ ವರ್ಷ ನೌಕರಿಯಿಂದ ನಿವೃತ್ತರಾಗಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿಯವರು ಎಷ್ಟು ಶಿಕ್ಷಣ ಮಾಡಿದ್ದರು ಎಂದು ಸಹ ನನಗೆ ಗೊತ್ತಿಲ್ಲ.

ನಾನು ಪ್ರತಿವಾದಿಯ ತಂದೆಯ ಜೊತೆಗೆ ಜಮೀನು ಖರೀದಿಯ ಕುರಿತು ನಿಪಿ 1 ರಂತೆ ಸಂಚಕಾರ ಪತ್ರವನ್ನು 1998 ರಲ್ಲಿ ಮಾಡಿರುತ್ತೇವೆ. ನಿಪಿ 1 ನ್ನು ನೊಂದಾಯಿಸಿರಲಿಲ್ಲ. ನಿಪಿ 1 ನ್ನು ಧಾರವಾಡದಲ್ಲಿ ತಯಾರಿಸಿರುತ್ತೇವೆ. ನಿಪಿ 1 ನ್ನು ಪ್ರತಿವಾದಿಯ ತಂದೆಯಾದ ನಮ್ಮ ಚಿಕ್ಕಪ್ಪನ ಮನೆಯಲ್ಲಿಯೇ ಬರೆದಿರುತ್ತೇವೆ. ಸದರಿ ನಿಪಿ 1 ನ್ನು ಬರೆಯಲು ನಮ್ಮ ಚಿಕ್ಕಪ್ಪ ಒಬ್ಬರನ್ನು ಕರೆಯಿಸಿದ್ದರು. ನಿಪಿ 1 ನ್ನು ಒಟ್ಟು ಒಂದು ಲಕ್ಷ 20 ಸಾವಿರಗಳಿಗೆ

ಬರೆಯಿಸಿರುತ್ತೇವೆ. ಅದರ ಪೈಕಿ ಸಂಚಕಾರ ಎಂದು ರೂ.60,000/- ಗಳನ್ನು ಕೊಟ್ಟಿರುತ್ತೇವೆ. ಸದರಿ ಜಮೀನನ್ನು ಯಾವ ಅಡಚಣೆಯ ಕಾರಣಕ್ಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಏನು ಅಡಚಣೆ ಇತ್ತು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ವಾದ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ವಾದ ಪತ್ರದಲ್ಲಿ ನಮ್ಮ ಚಿಕ್ಕಪ್ಪನಿಗೆ ಕೋರ್ಟು, ಮನೆತನದ ಅಡಚಣೆ ಹಾಗೂ ಇನ್ನಿತರ ಕಾರಣಗಳು ಇದ್ದವು ಎಂದು ನಾನು ಬರಯಿಸಿರುವುದಿಲ್ಲ. ನನಗೆ ಕನ್ನಡ ಓದಲು ಬರುವುದಿಲ್ಲ ಆದರೆ ಸಹಿ ಮಾಡುತ್ತೇನೆ.

ನಿಪಿ 1 ರಂತೆ ಇರುವ ಸಂಚಕಾರ ಪತ್ರದಲ್ಲಿ ಬಾಕಿ ಇರುವ ಹಣ ವನ್ನು ಬಸವಜಯಂತಿ ಒಳಗಡೆ ಕೊಟ್ಟು ರಶೀದಿ ಪಡಿಯಬೇಕು. ಬಾಕಿ ಹಣ ಕೊಡದೇ ಇದ್ದರೆ ಈಗ ಸಂಚಕಾರ ಎಂದು ಕೊಟ್ಟ 60 ಸಾವಿರಗಳು ಸಹ ಬೋಡ ಆಗುತ್ತದೆ ಎಂದು ನಮೂದು ಇದೆ ಎಂದರೆ ನಿಜ. ಅಲ್ಲದೇ ಸದರಿ ಸಂಚಕಾರ ಪತ್ರ ಸಹ ರದ್ದಾಗುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ನಿಜ. ಸದರಿ ಸಂಚಕಾರ ಪತ್ರದ ಪ್ರಕಾರ ಬಸವಜಯಂತಿ ಒಳಗಡೆ ಖೇರಿದಿ ಮಾಡಿಕೊಳ್ಳಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇರಲಿಲ್ಲ ಆದರೆ ನಮ್ಮ ಚಿಕ್ಕಪ್ಪನ ಇಬ್ಬರು ಗಂಡು ಮಕ್ಕಳು ಹಾಗೂ ಇನ್ನೊಬ್ಬ ಹೆಣ್ಣು ಮಗಳ ಎಲ್ಲರನ್ನು ಕರೆಯಿಸಿ ಸಹಿ ಮಾಡಿ ಖರೀದಿ ಪತ್ರ ಮಾಡಿಕೊಡುವಂತೆ ಹೇಳಿದಾಗ ನಮ್ಮ ಚಿಕ್ಕಪ್ಪ ನಮ್ಮ ಮಕ್ಕಳು ಸಹಿ ಮಾಡಲು ಹಿಂಜಯರಿಯುತ್ತಿದ್ದಾರೆ ಎಂಬ ಕಾರಣ ಹೇಳಿ ಖರೀದಿ ಮಾಡಿ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಮೂರು ಜನ

ಮಕ್ಕಳ ಪಾಲು ಇತ್ತು ಎಂದರೆ ಸಾಕ್ಷಿಯು ನಮ್ಮ ಚಿಕ್ಕಪ್ಪನ ಮಕ್ಕಳಾಗಿರುವುದರಿಂದ ಪಾಲು ಇತ್ತು ಎಂದು ಹೇಳುತ್ತಾರೆ. ಪ್ರತಿವಾದಿಯ ತಂದೆಯಾದ ನಮ್ಮ ಚಿಕ್ಕಪ್ಪ ನಿಪಿ 1 ನ್ನು ಮಾಡುವ ಸಮಯದಲ್ಲಿ ಆರೋಗ್ಯವಾಗಿದ್ದು ಖರೀದಿಯನ್ನು ತಮ್ಮ ಮಕ್ಕಳ ಸಹಿ ಸಲುವಾಗಿ ಮಾತ್ರ ತಡೆಹಿಡಿದಿದ್ದರು. ನಿಪಿ 1 ರ ಪ್ರಕಾರ ಖರೀದಿ ಮಾಡಿಕೊಡುವಂತೆ ನಮ್ಮ ಚಿಕ್ಕಪ್ಪನನ್ನು ಕೇಳಲು ಹೋದಾಗ ನಮ್ಮ ಚಿಕ್ಕಪ್ಪ ಆರೋಗ್ಯವಾಗಿದ್ದ ನಂತರ 2000 ನೇ ಇಸ್ವಿಯಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ಚಿಕ್ಕಪ್ಪ ಮರಣ ಹೊಂದಿದ ನಿಖರವಾದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ನಿಪಿ 1 ರಲ್ಲಿ ಬರೆದಿರುವ ಬಸವಜಯಂತಿ ನಂತರ ಸುಮಾರು ಒಂದೂವರೆ ವರ್ಷಗಳ ಕಾಲ ನಮ್ಮ ಚಿಕ್ಕಪ್ಪ ಬದುಕಿದ್ದರು ಎಂದರೆ ನಿಜ. ನಮ್ಮ ಚಿಕ್ಕಪ್ಪನ ತನ್ನ ಜೀವಿತಾವದಿಯಲ್ಲಿ ಖರೀದಿ ಮಾಡಿ ಕೊಡಲು ಕೇಳಿದಾಗ ಅವರು ವಿಳಂಬ ಮಾಡಿರುವುದಕ್ಕೆ ನಮ್ಮ ವಕೀಲರ ಮುಖಾಂತರ ನೋಟೀಸ ಕೊಡಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ನಮಗೆ ಗೊತ್ತಾಗದ ಕಾರಣ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ನಂತರ ಸದರಿಯವರ ವಾರಸಾ ದಾಖಲಾದ ನಂತರ ನೋಟೀಸ ಕೊಡಬೇಕು ಎಂದು ಗೊತ್ತಾಗಿರುತ್ತದೆ. ಪ್ರತಿವಾದಿಗಳು ನಮ್ಮ ಚಿಕ್ಕಪ್ಪನ ಮರಣದ ಒಂದು ವರ್ಷಗಳ ನಂತರ ವಾರಸಾ ಮಾಡಿರುತ್ತಾರೆ. ಪ್ರತಿವಾದಿಯರಿಗೆ ನಿಪಿ 1 ರ ಕುರಿತು ಯಾವಾಗ ನೋಟೀಸ ಕೊಟ್ಟಿರುತ್ತೇವೆ ಎಂದು ನನಗೆ ಈಗ ನೆನಪಿಲ್ಲ.

ಪ್ರತಿವಾದಿಯರಿಗೆ ನಿಪಿ 5 ರಂತೆ ದಿಃ 14.05.2024 ರಂದು ಕೊಟ್ಟಿರುತ್ತೇವೆ

ಎಂದರೆ ನಿಜ. ನಿಪಿ 5 ರಂತೆ ನೊಟೀಸ ತಯಾರಿಸಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಿಪಿ 1 ನ್ನು ಬೆಳಗಾವಿಯಲ್ಲಿ ದಂಡ ಸಹಿತ ಶುಲ್ಕವನ್ನು ಭರಣಾ ಮಾಡಿ ನೊಂದಾಯಿಸಿಕೊಂಡು ಬಂದಿರುತ್ತೇನೆ. ನಿಪಿ 1 ನ್ನು ನೊಂದಾಯಿಸಲು ಸುಮಾರು ಒಂದು ಲಕ್ಷ ಹಣವನ್ನು ಭರಣಾ ಮಾಡಿರುತ್ತೇವೆ. ನಿಪಿ 1 ನ್ನು ನೊಂದಾಯಿಸಲು ನಮ್ಮ ವಕೀಲರು ಹೇಳಿದ ಮೇರೆಗೆ ಮಾಡಿಸಿರುತ್ತೇವೆ. ನಿಪಿ 1 ನ್ನು ನ್ಯಾಯಾಲಯದಲ್ಲಿ ದಾವೆ ಹೂಡುವ ಕಾರಣದಿಂದ ನೊಂದಾಯಿಸಿಕೊಂಡು ಬಂದಿರುತ್ತೇವೆ. ನಿಪಿ 1 ನ್ನು ದಿಃ 16.11.2023 ರಂದು ನೋಂದಣಿ ಮಾಡಿಸಿರುತ್ತೇನೆ ಎಂದರೆ ನಿಜ.

ಪ್ರತಿವಾದಿಗಳಿಗೆ ನಿಪಿ 1 ರ ಪ್ರಕಾರ ಖರೀದಿ ಮಾಡಿಕೊಡಲು ಕೇಳಿದಾಗ ಪ್ರತಿವಾದಿಯರು ಈಗಿನ ಮಾರುಕಟ್ಟೆ ಬೆಲೆ ಕೊಟ್ಟರೆ ಖರೀದಿ ಮಾಡಿಕೊಡುತ್ತೇವೆ ಎಂದು ಹೇಳಿದ್ದರಿಂದ ನಿಪಿ 1 ನ್ನು ನೋಂದಣಿ ಮಾಡಿ ನ್ಯಾಯಾಲಯಕ್ಕೆ ಈ ದಾವೆಯನ್ನು ಹೂಡಿರುತ್ತೇವೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ, ಆಲಿಸಿ ಸಮಯವನ್ನು ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**